**ಓ ಎಸ್ ನಂಃ 220-15**
**ಡಿ ಡಬ್ಲ್ಯೂ ಃ 2**

**ದಿಃ 03-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಸಿ ಕೆ ವಕೀಲರಿಂದ**

10. ನಾನು ಕೂಡ್ಲೂರಿನಲ್ಲಿ ವಾಸಮಾಡುತ್ತಿದ್ದೇನೆ. ನಾನು ಮಾಗಡಿ ತಾಲ್ಲೂಕು, ಗರಿಗೇಶ್ವರ ಪುರ ಸರ್ಕಾರಿ ಶಾಲೆಯ ಶಿಕ್ಷಕನಾಗಿರುತ್ತೇನೆ. ಕೂಡ್ಲೂರಿನಿಂದ ಗರಿಗೇಶ್ವರಪುರ 5 ಕಿ ಮೀ ಆಗುತ್ತದೆ. ನರಸಿಂಹಯ್ಯ ನನಗೆ ತಂದೆಯಾಗಬೇಕು. ನರಸಿಂಹಯ್ಯರವರಿಗೆ ಇಬ್ಬರು ಹೆಂಡತಿಯರಿದ್ದು ಅವರು ಮಲ್ಲಮ್ಮ ಮತ್ತು ಚಿಕ್ಕಮ್ಮ ಎಂದರೆ ನಿಜ. ನನ್ನ ಚಿಕ್ಕಮ್ಮರವರಿಗೆ ಐದು ಜನ ಮಕ್ಕಳು ಎಂದರೆ ನಿಜ. ನರಸಿಂಹಯ್ಯರವರು ತೀರಿಕೊಂಡ ನಂತರ ಚಿಕ್ಕಮ್ಮರವರ ಮಕ್ಕಳು ಮತ್ತು ನಮ್ಮ ಮಕ್ಕಳು ಮತ್ತು ನಮ್ಮ ಸಹೋದರರು ವಿಭಾಗ ಆಗಿಲ್ಲ ಎಂದರೆ ನಿಜ. ನರಸಿಂಹಯ್ಯರವರು ತೀರಿಕೊಂಡ ನಂತರ ನಮ್ಮ ಕುಟುಂಬದಲ್ಲಿ ಯಾವುದೇ ಸ್ವತ್ತಿಗೆ ಸಂಬಂದಿಸಿದಂತೆ ವಿಭಾಗ ಆಗಿಲ್ಲ ಎಂದರೆ ನಿಜ. ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ನಿಜ. ನಾವು ಮತ್ತು ನನ್ನ ಸಹೋದರರು ಮತ್ತು ನನ್ನ ಸಹೋದರರ ಮಕ್ಕಳು ದಾವಾ ಆಸ್ತಿಗಳ ಜಂಟಿ ಕಬ್ಜೆಯನ್ನು ಹೊಂದಿರುತ್ತೇವೆ ಎಂದರೆ ನಿಜ. ದಾವಾ ಆಸ್ತಿಗಳಲ್ಲಿ ನನಗೆ ನನ್ನ ಸಹೋದರ ಸಹೋದಯರಿಗೆ ಮತ್ತು ಅವರ ಮಕ್ಕಳುಗಳಿಗೆ ಸಮಾನವಾದ ಹಕ್ಕು ಇದೆ ಎಂದರೆ ನಿಜ.

11. ವಾದಿಗಳು ನನ್ನ ಅಣ್ಣ ನಾರಾಯಣಪ್ಪರವರ ಮಕ್ಕಳು ಆಗಿರುತ್ತಾರೆ. ನಾರಾಯಪ್ಪರವರು ಈಗ ಬೆಂಗಳೂರಿನಲ್ಲಿ ವಾಸವಿರುತ್ತಾರೆ. ನನಗೆ 10-12 ವರ್ಷ ವಯಸ್ಸು ಇದ್ದಾಗ ನಾರಾಯಣಪ್ಪ ಬೆಂಗಳೂರಿಗೆ ಹೋಗಿರುತ್ತಾರೆ. ನಾನು ಚಿಕ್ಕವನಿದ್ದಾಗ ನಾರಾಯಣಪ್ಪರವರ ಮದುವೆ ನರಸಮ್ಮರವರ ಜೊತೆಗೆ ಆಗಿತ್ತು ಎಂದರೆ ನಿಜ. ನಾರಾಯಣಪ್ಪರವರು ಮೊದಲು ಖಾಸಗಿ ಕೆಲಸ ಮಾಡುತ್ತಿದ್ದು ನಂತರ ಪೋಲಿಸ್ ಇಲಾಖೆಗೆ ಸೇರಿರುತ್ತಾರೆ. ನಾರಾಯಣಪ್ಪರವರ ವರಮಾನ ಮತ್ತು ಅವರ ಕುಟುಂಬದ ಖರ್ಚು ವೆಚ್ಚ ನನಗೆ ಗೊತ್ತಿಲ್ಲ. ನಾರಾಯಣಪ್ಪರವರು ತಮ್ಮ ಮದುವೆಯಾದ ನಂತರ ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಜೀವನ ಸಾಗಿಸುವುದು ದುಬಾರಿ ಇದ್ದು ಆದ ಕಾರಣ ನಾರಾಯಣಪ್ಪರವರ ಆದಾಯ ಅವರ ಕುಟುಂಬಕ್ಕೆ ಸರಿಹೋಗುತ್ತಿತ್ತು ಎಂದರೆ ನಿಜ. ಆದ ಕಾರಣ ನಾರಾಯಣಪ್ಪರವರಿಗೆ ಆದಾಯದಲ್ಲಿ ಉಳಿತಾಯ ಆಗುತ್ತಿರಲಿಲ್ಲ ಎಂದರೆ ನಿಜ. ನನ್ನ ಸಹೋದರರು ಎಲ್ಲರೂ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ನಿಜ. ನನ್ನ ಸಹೋದರರು ಬೆಂಗಳೂರಿಗೆ ಹೋಗಿ ಸುಮಾರು 30-40 ವರ್ಷ ಆಗಿರುತ್ತದೆ.

12. ದಾವಾ ಆಸ್ತಿಗಳು ಮಳೆಯಾದಾರಿತ ಜಮೀನುಗಳು ಎಂದರೆ ನಿಜ. ಸಾಕ್ಷಿ ಮುಂದುವರೆದು ಬಾವಿ ಇರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳಲ್ಲಿ ಮಳೆಯಾದಾಗ ರಾಗಿ ಮತ್ತು ಹುರುಳಿ ಬೆಳೆಯುತ್ತಾರೆ ಎಂದರೆ ದಾವಾ ಆಸ್ತಿಗಳಲ್ಲಿ ರಾಗಿ, ಹುರುಳಿ, ಭತ್ತ, ಕಬ್ಬು ಮತ್ತು ತೆಂಗು ಬೆಳೆಯಲಾಗುತ್ತಿದೆ ಎಂದು ಹೇಳುತ್ತಾರೆ. ನನ್ನ ತಂದೆ ಬದುಕಿದ್ದಾಗ ಮೇಲೆ ಹೇಳಿದ ಬೆಳೆ ಜಮೀನುಗಳಲ್ಲಿ ನನ್ನ ತಂದೆ ಬೆಳೆಯುತ್ತಿದ್ದರು. ನನ್ನ ತಂದೆ 1984 ಅಥವಾ 1985 ರಲ್ಲಿ ತೀರಿಕೊಂಡಿರಬಹುದು ನಿಖರವಾಗಿ ಗೊತ್ತಿಲ್ಲ. ನಮ್ಮ ತಂದೆ ಬೆಳೆಯುತ್ತಿದ್ದ ಬೆಳೆಗಳಿಂದ ಬರುವ ಆದಾಯ ನಮ್ಮ ಕುಟುಂಬಕ್ಕೆ ಸರಿಯಾಗುತ್ತಿತ್ತು ಎಂದರೆ ನಿಜ. ನನ್ನ ತಂದೆ ಐದು ಜನ ಗಂಡು ಮಕ್ಕಳ ಮತ್ತು ಐದು ಜನ ಹೆಣ್ಣು ಮಕ್ಕಳ ಮದುವೆ ಮಾಡಲು ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

13. ನನ್ನ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ಅಣ್ಣಂದಿರು ಸೇರಿ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದೇವೆ. ನನ್ನ ತಂದೆ ತೀರಿಕೊಂಡ ನಂತರ ಈಗ ದಾವಾ ಆಸ್ತಿಗಳಲ್ಲಿ ಕೇವಲ ಹುರುಳಿ ಬೆಳೆಯನ್ನು ಬೆಳೆಯುತ್ತಿದ್ದೇವೆ.

14. ನಾರಾಯಣಪ್ಪರವರ ಕೌಟುಂಬಿಕ ವಿಚಾರದ ಬಗ್ಗೆ ನನಗೆ ಮಾಹಿತಿ ಇದೆ. ನಾರಾಯಣಪ್ಪರವರು ಸರ್ಕಾರಿ ನೌಕರಿಯಲ್ಲಿದ್ದು ಅವರ ಹೆಂಡತಿ ನರಸಮ್ಮ ಚೀಟಿ ವ್ಯವಹಾರಗಳನ್ನು ಮಾಡುತ್ತಿದ್ದರು ಅದಕ್ಕೆ ನಾರಾಯಣಪ್ಪರವರು ತಕರಾರು ಮಾಡಿದ್ದು ಆ ಬಗ್ಗೆ ನಾರಾಯಣಪ್ಪ ಮತ್ತು ನರಸಮ್ಮರವರ ಮದ್ಯೆ ತಕರಾರು ಆಗಿತ್ತು ಎಂದು ಹೇಳುತ್ತಾರೆ. ನಂತರ ನಾರಾಯಣಪ್ಪ ಮತ್ತು ನರಸಮ್ಮರವರು ಬೇರೆ ಬೇರೆಯಾಗಿದ್ದು ಯಾವಾಗ ಬೇರೆಯಾಗಿರುತ್ತಾರೆ ಗೊತ್ತಿಲ್ಲ. ನಾರಾಯಣಪ್ಪ ಮತ್ತು ನರಸಮ್ಮರವರ ಮದ್ಯೆ ಕಾನೂನಿನ ಅಡಿಯಲ್ಲಿ ವಿವಾಹ ವಿಚ್ಛೇದನೆ ಆಗಿಲ್ಲ ಎಂದರೆ ನಿಜ. ಆದ ಕಾರಣ ಈಗಲೂ ಸಹ ನಾರಾಯಣಪ್ಪ ಮತ್ತು ನರಸಮ್ಮ ಗಂಡ ಹೆಂಡತಿ ಎಂದರೆ ನಿಜ. ನಾರಾಯಣಪ್ಪರವರು ತಮ್ಮ ಹೆಂಡತಿ ಮತ್ತು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೇ ಇರುವುದರಿಂದ ನರಸಮ್ಮರವರು 1996 ರಲ್ಲಿ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ನಿಜ. ಆ ಅರ್ಜಿ ಇತ್ಯರ್ಥ ಆಗುವ ಮೊದಲೇ ನಾರಾಯಣಪ್ಪರವರು ಬೇರೆ ಹೋಗಿರುತ್ತಾರೆ ಎಂದರೆ ನಾರಾಯಣಪ್ಪರವರು ತಮ್ಮ ಕರ್ತವ್ಯವನ್ನು ಮುಗಿಸಿಕೊಂಡು ಬರುವಷ್ಟರಲ್ಲಿ ನರಸಮ್ಮರವರು ಮನೆ ಖಾಲಿ ಮಾಡಿಕೊಂಡು ಬೀಗ ಹಾಕಿ ಹೋಗಿರುತ್ತಾರೆ ಎಂದು ಹೇಳುತ್ತಾರೆ. ನಾರಾಯಣಪ್ಪರವರು ನ್ಯಾಯಾಲಯದ ಆದೇಶದಂತೆ ಅವರ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಕೊಟ್ಟಿದ್ದು ಎಷ್ಟು ಕೊಟ್ಟಿರುತ್ತಾರೆ ಗೊತ್ತಿಲ್ಲ. ಜೀವನಾಂಶಕ್ಕಾಗಿ ನಾರಾಯಣಪ್ಪರವರು ಎಷ್ಟು ಹಣ ಕೊಡುತ್ತಿದ್ದರು ನಿಖರವಾಗಿ ಗೊತ್ತಿಲ್ಲ. 1996 ರಲ್ಲಿ ಜೀವನಾಂಶದ ಅರ್ಜಿಯನ್ನು ಸಲ್ಲಿಸುವಾಗ ನಾರಾಯಣಪ್ಪ ತಾತ್ಕಾಲಿಕ ಜೀವನಾಂಶವನ್ನು ಅರ್ಜಿ ವಜಾವಾಗುವವರೆಗೂ ಕೊಟ್ಟಿದ್ದರು ಎಂದರೆ ನಿಜ. ಅರ್ಜಿ ತಾಂತ್ರಿಕ ಕಾರಣದಿಂದ ವಜಾ ಆಗಿದ್ದು ಅರ್ಜಿ ವಜಾ ಆದ ನಂತರ

ನಾರಾಯಣಪ್ಪ ತಮ್ಮ ಹೆಂಡತಿ ಮಕ್ಕಳಿಗೆ ಜೀವನಾಂಶ ಕೊಟ್ಟಿಲ್ಲ ಎಂದರೆ ನಿಜ. 1996 ರಲ್ಲಿ ನರಸಮ್ಮರವರ ಇಬ್ಬರು ಮಕ್ಕಳು ಅಪ್ರಾಪ್ತರಾಗಿದ್ದರು ಎಂದರೆ ನಿಜ. 1996 ರಲ್ಲಿ ನರಸಮ್ಮರವರ ನಾಲ್ಕು ಜನ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದರು ಯಾರದು ಮದುವೆಯಾಗಿರಲಿಲ್ಲ ಎಂದರೆ ನಿಜ. ನರಸಮ್ಮರವರು ತಮ್ಮ ಅಣ್ಣ ಮತ್ತು ತಂದೆಯ ಸಹಾಯದಿಂದ ತಮ್ಮ ಜೀವನ ಸಾಗಿಸುತ್ತಿದ್ದರು ಎಂದರೆ ನಿಜ. ನರಸಮ್ಮರವರು ತಮ್ಮ ಅಣ್ಣ ಮತ್ತು ತಂದೆಯ ಸಹಕಾರದಿಂದ ತಮ್ಮ ಮಕ್ಕಳ ಮದುವೆ ಮಾಡಿರುತ್ತಾರೆ ಎಂದರೆ ನಿಜ. ನರಸಮ್ಮ ಮತ್ತು ನಾರಾಯಣಪ್ಪರವರ ವೈಮನಸ್ಸಿನಿಂದ ಅವರ ಮಕ್ಕಳ ಹಾಳಾಗಿರುತ್ತದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ನಾವು ಹೋಗಿ ಅವರಿಗೆ ಬರಬೇಕೆಂದು ಕರೆದಿದ್ದು ಅವರು ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನಾರಾಯಣಪ್ಪರವರು ತಮ್ಮ ಮಕ್ಕಳಿಗೆ ಹಣವಾಗಲೀ, ಸ್ಥಿರ ಆಸ್ತಿಯಾಗಲೀ ಅಥವಾ ಚರಾಸ್ತಿಯಾಗಲೀ ಕೊಟ್ಟಿಲ್ಲ ಎಂದರೆ ನಿಜ. ಈಗಲೂ ಸಹ ನಾರಾಯಣಪ್ಪರವರ ಮಕ್ಕಳು ತಮ್ಮ ಸಣ್ಣಪುಟ್ಟ ಕೆಲಸಗಳಿಂದ ಮತ್ತು ತಾಯಿಯ ಸಹಾಯದಿಂದ ಜೀವನ ಮಾಡುತ್ತಿದ್ದಾರೆ ಎಂದರೆ ನಿಜ. ಆದ ಕಾರಣ ನಾರಾಯಣಪ್ಪರವರಿಗೆ ಸಂಬಂದಪಟ್ಟ ಆಸ್ತಿಯಲ್ಲಿ ನಾರಾಯಣಪ್ಪರವರ ಮಕ್ಕಳಿಗೆ ಹಕ್ಕು ಇದೆ ಎಂದರೆ ನಿಜ.

15. ನಾರಾಯಣಪ್ಪರವರು ನರಸಮ್ಮರವರಿಗೆ ಶಾಶ್ವತ ಪರಿಹಾರವಾಗಿ ಹಣ, ಸ್ಥಿರ ಆಸ್ತಿ ಅಥವಾ ಚರ ಆಸ್ತಿಯನ್ನು ಕೊಟ್ಟಿರುತ್ತಾರಾ ಎಂದರೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ವಾದಿಗಳು ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ಭಾಗ ಬೇಕೆಂದು ಕೇಳಿ ಹೂಡಿರುತ್ತಾರೆ. ದಾವಾ ಆಸ್ತಿಗಳಲ್ಲಿ ನಾರಾಯಣಪ್ಪರವರಿಗೆ ಹಕ್ಕು ಇದೆ ಎಂದರೆ ನಿಜ. ಆದ ಕಾರಣ ನಾರಾಯಣಪ್ಪರವರ ಪಿತ್ರಾರ್ಜಿತ ಆಸ್ತಿಗಳಲ್ಲಿ ಅವರ ಮಕ್ಕಳು ಅಂದರೆ ವಾದಿಗಳಿಗೂ ಸಹ ಹಕ್ಕು ಇದೆ ಎಂದರೆ ನಿಜ. ವಾದಿಗಳು ತಮ್ಮ ತಂದೆಯ ಭಾಗಕ್ಕೆ ಬಂದ ಆಸ್ತಿಗಳಲ್ಲಿ ಭಾಗ ಪಡೆಯಲು ನನ್ನದು ತಕರಾರು ಇರುವುದಿಲ್ಲ. ಈ ದಾವೆಯನ್ನು ಹೂಡುವ ಮೊದಲು ಅಂದರೆ ಮೇ 2015 ಆಸುಪಾಸಿನಲ್ಲಿ ವಾದಿಗಳು ಭಾಗ ಕೊಡಬೇಕೆಂದು ಅವರ ತಂದೆ ಮತ್ತು ನಮ್ಮನ್ನು ಕೇಳಿದ್ದರು ಎಂದರೆ ನಿಜ. ಈ ದಾವೆಯಲ್ಲಿ ನಾನು ಪ್ರತ್ಯೇಕವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ನಾರಾಯಣಪ್ಪರವರು ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ಅಳವಡಿಸಿಕೊಂಡಿರುತ್ತೇನೋ ಇಲ್ಲವೋ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಇದುವರೆಗೂ ನಮ್ಮ ಒಟ್ಟು ಕುಟುಂಬದಲ್ಲಿ ವಿಭಾಗ ಆಗದೇ ಇರುವುದರಿಂದ ನ್ಯಾಯಾಲಯದ ಮೂಲಕ ವಿಭಾಗ ಆಗಲು ನನ್ನದೇನು ತಕರಾರು ಇರುವುದಿಲ್ಲ. ನಾರಾಯಣಪ್ಪರವರ ಸಾಕ್ಷಿ ವಿಚಾರಣೆ ಸಮಯದಲ್ಲಿ ನಾನು ನ್ಯಾಯಾಲಯದಲ್ಲಿ ಹಾಜರಿದ್ದೆ ಎಂದರೆ ಸರಿಯಲ್ಲ. ನಮ್ಮ ವಕೀಲರು ಈ ನ್ಯಾಯಾಲಯದಲ್ಲಿ ಸಾಕ್ಷಿ ಕೊಡಬೇಕೆಂದು ನನ್ನನ್ನು ಕರೆದಿದ್ದು ನಾರಾಯಣಪ್ಪರವರು ಕರೆದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತಯಾರು ಮಾಡಿದ್ದು ನಾನು ಸಹಿ ಮಾಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು

ಸುಮಾರಾಗಿ ಓದಿ ಸಹಿ ಮಾಡಿದ್ದು ನಮ್ಮ ವಕೀಲರ ಮೇಲೆ ನಂಬಿಕೆ ಇರುತ್ತದೆ, ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಪೂರ್ತಿಯಾಗಿ ನನಗೆ ಗೊತ್ತಿಲ್ಲ. ನಾರಾಯಣಪ್ಪರವರಿಗೆ ಬೆಂಬಲ ಕೊಡಲು ನಮ್ಮ ವಕೀಲರು ಕರೆದಿದ್ದರಿಂದ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ನಿಜ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**

ಓ ಎಸ್ ನಂಃ 220-15
ಡಿ ಡಬ್ಲ್ಯೂ ಃ 3

ದಿಃ 03-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಸಿ ಕೆ ವಕೀಲರಿಂದ

7. ನಾನು ವ್ಯವಸಾಯ ಮಾಡುತ್ತೇನೆ. ನನಗೆ 4 ನೇ ಪ್ರತಿವಾದಿ ಸಂಬಂದಿಕರಲ್ಲ ಆದರೆ ಒಂದೇ ಊರಿನವರಾಗಿರುತ್ತೇವೆ. 4 ನೇ ಪ್ರತಿವಾದಿಯ ತಂದೆಯ ಹೆಸರುನರಸಿಂಹಯ್ಯ ಆಗಿದ್ದು ಅವರಿಗೆ ಇಬ್ಬರು ಹೆಂಡತಿಯರು ಅವರ ಹೆಸರು ಮಲ್ಲಮ್ಮ ಮತ್ತು ಚಿಕ್ಕಮ್ಮ ಆಗಿರುತ್ತದೆ. ಮಲ್ಲಮ್ಮರವರಿಗೆ ಮಕ್ಕಳು ಇರಲಿಲ್ಲ, ಚಿಕ್ಕಮ್ಮರವರಿಗೆ ಐದು ಜನ ಗಂಡು ಮಕ್ಕಳು ಮತ್ತು ಐದು ಜನ ಹೆಣ್ಣು ಮಕ್ಕಳು ಇರುತ್ತಾರೆ. ನನಗೆ ನರಸಿಂಹಯ್ಯ ಹಾಗೂ ಅವರ ಹತ್ತು ಜನ ಮಕ್ಕಳ ಕುಟುಂಬದ ಎಲ್ಲಾ ವ್ಯವಹಾರಗಳು ಗೊತ್ತಿದೆ. 4 ನೇ ಪ್ರತಿವಾದಿ 10 ನೇ ತರಗತಿಯವರೆಗೆ ಓದಿರುತ್ತಾರೆ. ಈಗ 4 ನೇ ಪ್ರತಿವಾದಿ ಕೂಡ್ಲೂರಿನಲ್ಲಿ ವಾಸಮಾಡುತ್ತಿದ್ದಾರೆ. ನಾರಾಯಣಪ್ಪರವರು ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದು ಅವರು ಯಾವಾಗ ಬೆಂಗಳೂರಿಗೆ ಹೋಗಿರುತ್ತಾರೆ ಗೊತ್ತಿಲ್ಲ. ನಾರಾಯಣಪ್ಪರವರು ಮೊದಲಿನಿಂದಲೂ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು ಅದನ್ನು ಹೊರತುಪಡಿಸಿ ಅವರು ಬೇರೆ ಕೆಲಸ ಮಾಡಿಲ್ಲ. ನಾರಾಯಣಪ್ಪರವರು 1976 ರಲ್ಲಿ ಮದುವೆಯಾಗಿರುತ್ತಾರೆ. ನಾರಾಯಣಪ್ಪರವರು ಕೂಡ್ಲೂರಿನಲ್ಲಿದ್ದಾಗ ಮದುವೆಯಾಗಿರುತ್ತಾರೆ, ನಂತರ ಬೆಂಗಳೂರಿಗೆ ಹೋಗಿರುತ್ತಾರೆ. ನಾರಾಯಣಪ್ಪರವರಿಗೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಒಬ್ಬರು ಗಂಡು ಮಗ ಇದ್ದು ಅವರು ಬೆಂಗಳೂರಿನ ಬಿ ಕೆ ನಗರದಲ್ಲಿ ವಾಸ ಮಾಡುತ್ತಾರೆ. ಬಿ ಕೆ ನಗರ ಎಲ್ಲಿ ಬರುತ್ತದೆ ನನಗೆ ಗೊತ್ತಿಲ್ಲ. ನಾನು ವಾದಿಗಳ ಮನೆಗೆ ಎರಡು ಮೂರು ಬಾರಿ ಹೋಗಿರುತ್ತೇನೆ. ನಾನು ವಾದಿಗಳ ಮನೆಗೆ ಒಬ್ಬನೇ ಬಸ್ಸಿನಲ್ಲಿ ಹೋಗುತ್ತಿದ್ದೆ. ನಾನು ವಾದಿಗಳ ಮನೆಗೆ ಹೋದಾಗ ಅವರ ಕುಟುಂಬದ ವಿಷಯದ ಬಗ್ಗೆ ಚರ್ಚೆ ಮಾಡುತ್ತಿರಲಿಲ್ಲ. ಆದ ಕಾರಣ ವಾದಿಗಳ ಸಾಂಸಾರಿಕ ಜೀವನ ಮತ್ತು ಕುಟುಂಬದ ಜೀವನದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ನಿಜ. ನಾರಾಯಣಪ್ಪ

ಮತ್ತು ನರಸಮ್ಮರವರ ವೈಮನಸ್ಸಿನ ಬಗ್ಗೆ ನಾನು ಪಂಚಾಯ್ತಿಗೆ ಹೋಗಿರುವುದಿಲ್ಲ. ಈಗ 4 ನೇ ಪ್ರತಿವಾದಿ

ಮತ್ತು ನರಸಮ್ಮ ಬೇರೆ ಬೇರೆಯಾಗಿರುತ್ತಾರೆ. 1986 ರಲ್ಲಿ 4 ನೇ ಪ್ರತಿವಾದಿ ಮತ್ತು ನರಸಮ್ಮರವರ ಮದ್ಯೆ ವೈಮನಸ್ಸು ಉಂಟಾಗಿದ್ದು 1990 ನ್ಯಾಯಾಲಯಕ್ಕೆ ಹೋಗಿ 2002 ರಲ್ಲಿ ತೀರ್ಮಾನವಾಗಿರುತ್ತದೆ. ನ್ಯಾಯಾಲಯದ ಆದೇಶವನ್ನು ನಾನು ನೋಡಿಲ್ಲ. ಆದ ಕಾರಣ ನ್ಯಾಯಾಲಯದ ಆದೇಶ ಏನು ಆಗಿರುತ್ತದೆ ನನಗೆ ಗೊತ್ತಿಲ್ಲ. ನಾರಾಯಣಪ್ಪರವರು ನರಸಮ್ಮರವರಿಗೆ ಶಾಶ್ವತ ಜೀವನಾಂಶವಾಗಿ ಮನೆ ಕೊಟ್ಟಿದ್ದು 2002 ರಲ್ಲಿ ತೀರ್ಮಾನವಾದಾಗ ಕೊಟ್ಟಿರುತ್ತಾರೆ. 4 ನೇ ಪ್ರತಿವಾದಿ ಸೋಮೇಶ್ವರನಗರ ಮತ್ತು ಬಿ ಕೆ ನಗರದಲ್ಲಿರುವ ಮನೆ ಮತ್ತು ನಿವೇಶನವನ್ನು ನರಸಮ್ಮರವರಿಗೆ ಕೊಟ್ಟಿರುತ್ತಾರೆ. ನಾನು ಸದರಿ ಮನೆ ಮತ್ತು ನಿವೇಶನವನ್ನು ನೋಡಿರುವುದಿಲ್ಲ. ನಾರಾಯಣಪ್ಪರವರು ನರಸಮ್ಮರವರಿಗೆ ಬಿ ಕೆ ನಗರ ಮತ್ತು ಸೋಮೇಶ್ವರನಗರದ ನಿವೇಶನ ಮತ್ತು ಮನೆಯನ್ನು ದಾನಪತ್ರದ ಮೂಲಕ ಕೊಟ್ಟಿರುತ್ತಾರೆ. ದಾನಪತ್ರ ಬರೆದುಕೊಡುವಾಗ ನಾನು ನೋಡಿಲ್ಲ. ನಾನು ದಾನಪತ್ರವನ್ನು ನೋಡಿಲ್ಲ ಎಂದರೆ ನಿಜ. ವಾದಿಗಳು ತಮ್ಮ ಅಜ್ಜನ ಆಸ್ತಿಯಲ್ಲಿ ಭಾಗ ಬೇಕೆಂದು ಈ ದಾವೆ ಹೂಡಿರುತ್ತಾರೆ. ಈ ದಾವೆಯನ್ನು ಹೂಡುವ ಮೊದಲು ವಾದಿಗಳು ನಾರಾಯಣಪ್ಪರವರಿಗೆ ಭಾಗ ಕೊಡಬೇಕೆಂದು ಕೇಳಿದ್ದರು ಎಂದರೆ ನಿಜ. ಅದಕ್ಕೆ ನಾರಾಯಣಪ್ಪರವರು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ಭಾಗಕೊಡಲು ಬರುವುದಿಲ್ಲ ಎಂದು ಹೇಳಿದ್ದರು. ಈಗಲೂ ಸಹ ನರಸಿಂಹಯ್ಯರವರ ಮಕ್ಕಳು ಮತ್ತು ಮೊಮ್ಮಕ್ಕಳು ಒಟ್ಟು ಕುಟುಂಬದಲ್ಲಿಯೇ ಇದ್ದು ಅವರ ಕುಟುಂಬದಲ್ಲಿ ಭಾಗ ಆಗಿರುವುದಿಲ್ಲ ಎಂದರೆ ನಿಜ. ನರಸಿಂಹಯ್ಯರವರು ತೀರಿಕೊಂಡ ನಂತರ ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ದಾವಾ ಆಸ್ತಿಗಳ ಜಂಟಿ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ನಿಜ. ಈ ದಾವೆಯಲ್ಲಿ ಸಾಕ್ಷಿ ಹೇಳಲು ನನಗೆ 4 ನೇ ಪ್ರತಿವಾದಿ ಕರೆದಿರುತ್ತಾರೆ. ನಾನು ಮತ್ತು 4 ನೇ ಪ್ರತಿವಾದಿ ಸ್ನೇಹಿತರು ಎಂದರೆ ನಿಜ.

8. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು 4 ನೇ ಪ್ರತಿವಾದಿ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನಾನು ನಾರಾಯಣಪ್ಪರವರಿಗೆ ಅನುಕೂಲವಾಗಲಿ ಎಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನಿಜ. ನಾರಾಯಣಪ್ಪರವರ ಕುಟುಂಬದ ಬಗ್ಗೆ ಮತ್ತು ನರಸಿಂಹಯ್ಯರವರ ಕುಟುಂಬದ ಬಗ್ಗೆ ನನಗೆ ಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**